ಅಸಲ ದಾವಾ ಸಂಖ್ಯೆಃ 170/2022

ಪಿ .ಡ್ಬ್ಲ್ಯು ನಂ.2

**ಸಾಕ್ಷಿಯನ್ನು ದಿನಾಂಕಃ 11.03.2025 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲು ಃ ಶ್ರೀ ಎ.ಎಸ್.ವೈ, ಪ್ರತಿವಾದಿ ಪರ ವಕೀಲರಿಂದಃ**

ನಾನು ವಿದ್ಯಾಭ್ಯಾಸ ಕಲಿತಿಲ್ಲ. ದಾವಾ ಆಸ್ತಿಗಳಲ್ಲಿ ವಾದಿ ಮತ್ತು ಪ್ರತಿವಾದಿಯರು ಸನ್ 2021 ರಲ್ಲಿ ಪಾಲುವಾಟ್ನಿ ಮಾಡಿಕೊಂಡಿದ್ದಾರೆ ಎಂದರೆ, ಸಾಕ್ಷಿ ಹೌದು, ಆದರೆ ಸರಿಯಾಗಿ ಆಗಿಲ್ಲ ಎಂದು ನುಡಿಯುತ್ತಾರೆ.

ಸದರಿ ವಾಟ್ನಿಯ ಕಾಲಕ್ಕೆ ನಾನು ಹಿರಿತನ ಮಾಡಿದ್ದೇನೆ. ಉಪ ನೋಂದಣಾಧಿಕಾರಿ ಕಛೇರಿಯಲ್ಲಿ ನಾನು ವಾಟ್ನಿಪತ್ರಕ್ಕೆ ಸಾಕ್ಷಿದಾರನೆಂದು ಸಹಿ ಮಾಡಿಲ್ಲ. ಸನ್ 2021 ರಲ್ಲಿ ಆದ ಪಾಲುವಾಟ್ನಿಯಲ್ಲಿ ಯಾರ ಹಿಸ್ಸೆಗೆ, ಎಷ್ಟು ಆಸ್ತಿ ಹೋಯಿತು ಎಂದು ನನಗೆ ಗೊತ್ತಿಲ್ಲ. ವಾಟ್ನಿ ಪತ್ರ ಯಾರು ಬರೆದಿದ್ದರು ಎಂದು ನನಗೆ ನೆನಪಿಲ್ಲ. ವಾಟ್ನಿಪತ್ರ ಪಿ ಡಿ ನವನಕ್ಕಿ ಇವರು ಬರೆದಿದ್ದರು ಎಂದರೆ ಸರಿ. ವಾಟ್ನಿಪತ್ರ ಬರೆದು ದಾವೆಯ ಎಲ್ಲ ಪಕ್ಷಗಾರರಿಗೆ ಓದಿ, ತಿಳಿಸಿದ ನಂತರ ನವನಕ್ಕಿ ಇವರು ಅದನ್ನು ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಮಾಡಿಸಿದ್ದಾರೆ ಎಂದರೆ ಸಾಕ್ಷಿ ಪಾಲುವಾಟ್ನಿ ಸರಿಯಾಗಿ ಆಗಿಲ್ಲ ಎಂದು ನುಡಿಯುತ್ತಾರೆ.

ಸದರಿ ವಾಟ್ನಿಯಲ್ಲಿ ವಾದಿ ನಂಃ1 ಇವರ ಹಿಸ್ಸೆಗೆ ಮನೆ ಬಂದಿರುತ್ತದೆ. ಅದರ ನಂಬರ ಗೊತ್ತಿಲ್ಲ. ಸದರಿ ವಾಟ್ನಿಯಲ್ಲಿ ವಾದಿ ಮತ್ತು ಆಕೆಯ ಮಕ್ಕಳ ಹಿಸ್ಸೆಗೆ ಮುಧೋಳದ ಸಿಟಿಎಸ ನಂಃ 1509/1 ಅದರ ಮುನ್ಸಿಪಲ್ ನಂಃ 620 ನೀಡಲಾಯಿತು ಎಂದರೆ ಸರಿ. ಸದರಿ ತನ್ನ ಹಿಸ್ಸೆ ಪಡೆದ ನಂತರ ಅದನ್ನು ಒಪ್ಪಿ ದಾಖಲೆಯನ್ನು ನೋಂದಣಿ ಮಾಡಿಸಿದ್ದಾರೆ ಎಂದರೆ, ಸಾಕ್ಷಿ ವಾಟ್ನಿ ಸರಿಯಾಗಿ ಆಗಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಸದರಿ ವಾಟ್ನಿ ಸರಿಯಾಗಿ ಆಗಿಲ ಎಂದು ಯಾಕೆ ಹೇಳುತ್ತಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಎಲ್ಲರಿಗೂ ಸಮಾನವಾಗಿ ಹಿಸ್ಸೆ ನೀಡಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ ಮಾಹಿತಿ ನಾನೇ ನೀಡಿ ಬರೆಸಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿರುವ ಸಂಗತಿ ಸುಳ್ಳು ಎಂದರೆ ಸರಿಯಲ್ಲ. ವಾದಿ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.
-Sd/-
ಹೆಚ್ಚುವರಿ ಜೆಎಂಎಫ್‌ಸಿ ಮುಧೋಳ.

**ಸಾಕ್ಷಿಯ ಸಹಿ**